ಶ್ರೀ ಎಸ್.ಎಂ. ಕೃಷ್ಣ : ಕೆಲವೊಂದು ಅವ್ಯವಸ್ಥೆಯಲ್ಲಿ ಅಧಿಕಾರಿಗಳು ಶಾಮೀಲಾಗದೆ ಇಂತಹ ಅವ್ಯವಹಾರಗಳು ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಅದು ನಮ್ಮ ಅನುಭವದ ಆಧಾರದ ಮೇಲೆ ಆ ಒಂದು ನಿಷ್ಕರ್ಷೆಗೆ ನಾವು ಬರಬಹುದಾಗಿದೆ. ಮೇಲಿನ ವರ್ಗದ ಅಧಿಕಾರಿಗಳು ಇದರ ಬಗ್ಗೆ ಕಾನ್ ಸ್ಟೆಂಟ್ ಮಾನಿಟರ್ ಮಾಡತಕ್ಕಂಥದ್ದು ಕಾನ್ ಸ್ಟೆಂಟ್ ಸೂಪರ್‌ವಿಷನ್ ಮಾಡತಕ್ಕಂಥದ್ದು ಮತ್ತು ಸರ್ ಪ್ರೈಸ್ ಇನ್ಸ್ ಪೆಕ್ಷನ್ ಮಾಡುವುದು ಇದರಲ್ಲಿ ಹೆಚ್ಚು ಪ್ರಯೋಜನವಾಗುತ್ತದೆ. ಆದ್ದರಿಂದ ನಾನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆಯನ್ನು ನೀಡಿ ಸರ್ ಪ್ರೈಸ್ ಇನ್ಸ್ ಪೆಕ್ಷನ್ ಮಾಡಿ ಇದರ ಬಗ್ಗೆ ಸುಧಾರಣೆಯನ್ನು ಮಾಡುವ ಬಗ್ಗೆ ಒತ್ತುಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರಿಗೆ ವಂದನೆಗಳು. ಇವತ್ತು ಒಂದು ಗಂಟೆಯಲ್ಲಿ ಪ್ರಶ್ನೋತ್ತರ ಮುಗಿಯಬೇಕಾಗಿತ್ತು, ಬರೀ 55 ನಿಮಿಷಗಳಲ್ಲಿ ಎಲ್ಲವನ್ನೂ ಮುಗಿಸಿದ್ದೀರಿ. ಇನ್ನು 5 ನಿಮಿಷಗಳು ಬಾಕಿ ಇದೆ, ಪುನಃ ಇನ್ನೊಂದು ಸಲ ಪಾಪಸ್ಸು ಬರುತ್ತೇನೆ. ಈಗ ಉಮೇಶ್ ಕತ್ತಿಯವರು ಕೇಳಬಹುದು.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಕ್ವೆಶ್ಚನ್ ಇನ್ನೂ ಬಂದಿಲ್ಲ?

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ಸಾರಿ, ತಾವು ಸ್ವಲ್ಪ ಹೊತ್ತು ತಾಳೀ, ಮಾನ್ಯ ಗುಂಡಪ್ಪ ವಕೀಲರ ಒಂದು ಪ್ರಶ್ನೆ ಇದೆ.

ಔರಾದ್ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ

523 (4742) : **ಶ್ರೀ ಗುಂಡಪ್ಪ ವಕೀಲ್ (ಔರಾದ್)** : ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಔರಾದ್ ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ಸಮಸ್ಯೆಯನ್ನು ಬಗೆಹರಿಸಿ 30 ಸಾವಿರ ನಗರ ವಾಸಿಗಳಿಗೆ ಕುಡಿಯುವ ನೀರು ಒದಗಿಸಲು ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ; ವಿವರ ಒದಗಿಸುವುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ಸಚಿವರು):

ಅ) ಹೌದು.

ಆ) ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಅಂದಾಜು ಮೊತ್ತ ರೂ. 258.15 ಲಕ್ಷಗಳಿಗೆ ಸರ್ಕಾರವು ಅನುಮೋದನೆ ನೀಡಿದೆ.

ಇದಲ್ಲದೆ 2003–04ನೇ ಸಾಲಿನ ಬರಪರಿಹಾರ ಕಾಮಗಾರಿಯಡಿಯಲ್ಲಿ ರೂ. 8.19 ಲಕ್ಷ ಅಂದಾಜು ವೆಚ್ಚದಲ್ಲಿ 2 ಕೊಳವೆ ಬಾವಿ ತೆರೆದು ವಿದ್ಯುತ್ ಯಂತ್ರ ಅಳವಡಿಸಲಾಗಿದೆ ಹಾಗೂ 1 ತೆರೆದ ಬಾವಿಯ ಕಾಮಗಾರಿ ಪ್ರಗತಿಯಲ್ಲಿದೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ಔರಾದ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಆ ನಗರದಲ್ಲಿ 8 ಸಾವಿರ ಜನಸಂಖ್ಯೆ ಇದ್ದಾಗ ಮಾಡಿದಂತಹ ವ್ಯವಸ್ಥೆ ಇವತ್ತಿಗೂ ಕೂಡ ಅಷ್ಟೇ ಆಗಿದೆ. 35 ಸಾವಿರ ಜನಸಂಖ್ಯೆ ಇದ್ದರೂ ಕೂಡ ಅಲ್ಲಿಗೆ ಬೇಕಾಗಿರತಕ್ಕಂತಹ ಕುಡಿಯುವ

ನೀರಿನ ವ್ಯವಸ್ಥೆ ಆ ನಗರಕ್ಕೆ ಇನ್ನೂ ಆಗಿಲ್ಲ. ಅದರ ಸಲುವಾಗಿ ಪ್ರತಿ ಬೇಸಿಗೆಯ ಸಮಯದಲ್ಲಿ ಟ್ಯಾಂಕರ್ ಮುಖಾಂತರ ತಹಶೀಲ್ದಾರ್ ಆಫೀಸ್ ನಿಂದ ನೀರು ಸರಬರಾಜು ಆಗುತ್ತಿದೆ. ಆಮೇಲೆ ಈ ಅಧಿಕಾರಿಗಳೆಲ್ಲಾ ಆಫೀಸ್‌ಗೆ ಹೋಗುವ ಬದಲು ಕೊಡಗಳನ್ನು ಹಿಡಿದುಕೊಂಡು ನೀರಿಗಾಗಿ ಪರದಾಡುತ್ತಾರೆ. ಇಂತಹ ದೃಶ್ಯವನ್ನು ನಾವು ಬೇಸಿಗೆಯಲ್ಲಿ ನೋಡುತ್ತಿದ್ದೇವೆ. ಅದಕ್ಕಾಗಿ ಕುಡಿಯುವ ನೀರಿಗಾಗಿ ಒಂದು ಪರ್ಮನೆಂಟ್ ವ್ಯವಸ್ಥೆಯನ್ನು ಇಡೀ ನಗರಕ್ಕೆ ಸರಬರಾಜು ಆಗುವ ಹಾಗೆ ಮಾಡಿಕೊಡಬೇಕೆಂದು ಸರ್ಕಾರದ ಮುಂದೆ ನಾವು ನಾನಾ ರೀತಿಯಾಗಿ ಸಂಪರ್ಕವನ್ನು ಮಾಡಿದ್ದೇವೆ, ಹಾಗೂ ಮನವಿಯನ್ನು ಸಲ್ಲಿಸಿದ್ದೇವೆ. ಅದರ ಸಲುವಾಗಿ ಈ ನಿಟ್ಟಿನಲ್ಲಿ ಏನು ಕ್ರಮವನ್ನು ತೆಗೆದುಕೊಂಡಿದ್ದೀರಾ? ಅದು ಯಾವ ಹಂತದಲ್ಲಿದೆ, ಅದನ್ನು ಯಾವ ಯೋಜನೆಯಡಿಯಲ್ಲಿ ತೆಗೆದುಕೊಳ್ಳುತ್ತಿದ್ದೀರಿ? ಅದಕ್ಕೆ ತಗಲುವಂತಹ ವೆಚ್ಚವೇನು? ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎನ್ನುವುದರ ಬಗ್ಗೆ ನಿಖರವಾದ ಉತ್ತರವನ್ನು ಹೇಳಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, 2001ರ ಸೆನ್ಸ್ ಸ್ ಪ್ರಕಾರ ಈಗ ಬೀರಾದ್ ತಾಲ್ಲೂಕಿನಲ್ಲಿ 16,185 ಪಾಪ್ಯುಲೇಷನ್ ಇದೆ. ಈಗಾಗಲೇ ಅಲ್ಲಿ ಇಡೀ ದಿನ 18 ಬೋರ್ ವೆಲ್‌ಗಳು ಕೆಲಸವನ್ನು ಮಾಡುತ್ತಿವೆ, ಈ ವ್ಯವಸ್ಥೆಗೆ ಈಗಾಗಲೇ ಸುಮಾರು 8,19,000 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 2031ನೇ ಇಸವಿಯವರೆಗೆ ಸಂಪೂರ್ಣವಾಗಿ ಸುಮಾರು 33 ಸಾವಿರ ಜನಸಂಖ್ಯೆ ಬೆಳೆಯಬಹುದು ಎನ್ನುವಂತಹ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಸುಮಾರು 258 ಲಕ್ಷ ರೂ.ಗಳಲ್ಲಿ ರೂಪಿಸಲಾಗಿದೆ, ತಿಮ್ಮಾಪುರ ಎಂ.ಐ. ಟ್ಯಾಂಕ್ ಏನಿದೆ, ಅದರಿಂದಲೇ ಶಾಶ್ವತವಾಗಿ ಕುಡಿಯುವ ನೀರಿನ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತತ್‌ಕ್ಷಣ ಆ ಕಾರ್ಯ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಕೆಯುಡಬ್ಲ್ಯೂಎಸ್‌ಎಸ್‌ಬಿಯಿಂದಲೇ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದ್ದೇವೆ, ಈಗಾಗಲೇ ಮಂಜೂರಾತಿಯಾಗಿದೆ, ಆ ಕಾರ್ಯಕ್ರಮವನ್ನು ತತ್‌ಕ್ಷಣ ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡುತ್ತೇವೆ.

ಶ್ರೀ ಗುಂಡಪ್ಪ ವಕೀಲ್ : ಕುಡಿಯುವ ನೀರಿನ ಸರಬರಾಜು ಇರುವುದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ಒಂದು ವರ್ಷದಿಂದಲೂ ಇದೇ ರೀತಿಯಾದಂತಹ ಉತ್ತರವು ಬರುತ್ತಿದೆ. ಹೌಸ್ ಮುಂದೆ 4ನೇ ಸಲ ಈ ಕ್ವೆಶ್ಚನ್ ಬರುತ್ತಿದೆ, 3 ಸಲ ತಾವು ಅದೇ ರೀತಿಯಾಗಿ ಉತ್ತರವನ್ನು ಕೊಡುತ್ತಿದ್ದೀರಿ. ಇದರ ಬಗ್ಗೆ ಬೇಕಾದರೆ ನಾನು ಕಡತವನ್ನು ನಾನು ಮಂಡಿಸುತ್ತೇನೆ. ತಾವು ಯಾವಾಗ ಫೌಂಡೇಶನ್ಸ್ ನ್ನು ಇಡುತ್ತೀರಿ? ಯಾವಾಗ ಪ್ರಾರಂಭ ಮಾಡುತ್ತೀರೆನ್ನುವ ಬಗ್ಗೆ ನಿಖರವಾಗಿ ಹೇಳಬೇಕು. When you are going to come to my constituency?

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ಕಾರ್ಯಕ್ರಮ ಮಂಜೂರಾಗಿದೆ ಎಂದು ನಾನು ನಿಖರವಾಗಿಯೇ ಹೇಳಿದ್ದೇನೆ, ಈ ಅಸೆಂಬ್ಲಿ ಮುಗಿದ

ತಕ್ಷಣವೇ ಶೂರು ಮಾಡಬೇಕೆಂದರೆ, ಆ ಕಾರ್ಯಕ್ರಮವನ್ನು ಪ್ರಾರಂಭ ಮಾಡುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಇನ್ನು 4 ನಿಮಿಷಗಳು ಉಳಿದಿವೆ, ನಾನು ಮೊದಲಿನಿಂದ ಕೇಳಿಕೊಂಡು ಬರುತ್ತೇನೆ.

ಹುಕ್ಕೇರಿ ಪಟ್ಟಣಕ್ಕೆ ಕುಡಿಯುವ ನೀರಿನ ಟ್ಯಾಂಕ್ ನಿರ್ಮಾಣ

582 (5283) : ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1. ಬೆಳಗಾವಿ ಜಿಲ್ಲೆ, ಹುಕ್ಕೇರಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಡಿಯುವ ನೀರಿನ ದೃಷ್ಟಿಯಿಂದ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣಾ ಟ್ಯಾಂಕ್ ನಿರ್ಮಾಣದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;
2. ಸರ್ಕಾರಕ್ಕೆ ಈ ಪ್ರಸ್ತಾವನೆಯಡಿಯಲ್ಲಿ, ತಗಲುವ ಅಂದಾಜು ವೆಚ್ಚ ರೂ. 80.00 ಲಕ್ಷಗಳು ನೀಡಲಾಗಿದೆಯೇ?
3. ಸದರಿ ಟ್ಯಾಂಕ್ ನಿರ್ಮಾಣಕ್ಕೆ ಜಾಲಾವಕಾಶ ನಿಗದಿಪಡಿಸಲಾಗಿದೆಯೇ?
4. ಸದರಿ ನಿರ್ಮಾಣ ಕಾರ್ಯವು, ಕಳಪೆ ಆಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಯವರು):

1. – ಇಲ್ಲ –
2. ಉದ್ಭವಿಸುವುದಿಲ್ಲ.
3. ಉದ್ಭವಿಸುವುದಿಲ್ಲ.
4. ಈ ಹಂತದಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಅಧ್ಯಕ್ಷರೆ, ಈ ಉತ್ತರವನ್ನು ಗಮನಿಸಿದರೆ, ಸದನಕ್ಕೆ ಪೂರ್ತಿಯಾಗಿ ತಪ್ಪು ಮಾಹಿತಿ ಕೊಡುವಂತಹ ಉತ್ತರವೆಂದು ನನಗನ್ನಿಸುತ್ತದೆ. ಹುಕ್ಕೇರಿ ಕುಡಿಯುವ ನೀರಿನ ಬಗ್ಗೆ ಈಗಾಗಲೇ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದಿದೆ. ಹುಕ್ಕೇರಿ ಮತ್ತು ಸಂಕೇಶ್ವರ ಸೇರಿದಂತೆ 16 ಹಳ್ಳಿಗಳಿಗೆ ಹಿಡ್ಕಲ್ ಜಲಾಶಯದಿಂದ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಕಳೆದ 5 ವರ್ಷಗಳ ಹಿಂದೆ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಈ ಯೋಜನೆಯನ್ನು ಮಾಡಲಾಗಿದೆ. ನೀರನ್ನು ಸಂಗ್ರಹಿಸಲು ಯೋಗ್ಯವಾದಂತಹ ಟ್ಯಾಂಕ್ ಇಲ್ಲ. ಈ ಪ್ರಸ್ತಾವನೆಯು ಸರ್ಕಾರದ ಮುಂದೆ ಬಂದು 2 ವರ್ಷಗಳ ಮೇಲಾದರೂ ಕೂಡ ಇದುವರೆಗೂ ಪ್ರಸ್ತಾವನೆ ಬಂದಿಲ್ಲವೆಂದು ಹೇಳುತ್ತಾರೆ. ಉದ್ಭವಿಸುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾದ ಉತ್ತರವನ್ನು ನೋಡಿದರೆ ಇದು ಸರಿಯಾದ ಉತ್ತರವಲ್ಲವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಈ ಎಲ್ಲಾ ಯೋಜನೆಗಳು ಪೂರ್ತಿಯಾಗಿವೆ. ಕುಡಿಯುವ ನೀರಿಗಾಗಿ 12 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರನ್ನು ತಂದಿದ್ದೇವೆ. ಆದರೆ ನೀರನ್ನು ಸಂಗ್ರಹಿಸುವುದಕ್ಕೆ ಟ್ಯಾಂಕ್ ಇಲ್ಲದೇ ಇರುವುದರಿಂದ ಕುಡಿಯುವ ನೀರನ್ನು ಒದಗಿಸುವುದಕ್ಕಾಗುತ್ತಿಲ್ಲ ಎಂದು ಹೇಳಿದ್ದಾರೆ.